**All India Radio: Bangalore**

**National Bulletin In Kannada**

**31.05.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**31.05.2026 1.10 p.m.**

**<><><><>**

ಮುಖ್ಯಾಂಶಗಳು

1. ದೇಶದಲ್ಲಿ ತಾಪಮಾನ ಹೆಚ್ಚಳ; ಮಜ್ಜಿಗೆ ಸೇರಿದಂತೆ ಸಾಂಪ್ರದಾಯಿಕ ಪಾನೀಯ ಸೇವಿಸುವಂತೆ ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ
2. ಖಗೋಳ ವಿಜ್ಞಾನದ ಬಗ್ಗೆ ಯುವಜನರಲ್ಲಿ ಹೆಚ್ಚುತ್ತಿರುವ ಆಸಕ್ತಿಗೆ ಪ್ರಧಾನಿ ಶ್ಲಾಘನೆ
3. ಇರಾನ್ ಜೊತೆ ಪರಮಾಣು ಒಪ್ಪಂದ ಶೀಘ್ರ ಅಂತಿಮ; ಮಾತುಕತೆ ವಿಫಲವಾದರೆ, ಮಿಲಿಟರಿ ಕ್ರಮ - ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್
4. ಐಪಿಎಲ್ ಟಿ-೨೦ ಕ್ರಿಕೆಟ್; ಪ್ರಶಸ್ತಿಗಾಗಿ ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು -ಗುಜರಾತ್ ಟೈಟನ್ಸ್ ತಂಡಗಳ ಸೆಣಸು

<><><><>

‘ಮನ ಕಿ ಬಾತ್’ನ ೧೩೪ನೇ ಆವೃತ್ತಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಅವರು, ಕ್ರೀಡೆ, ಪರಿಸರ, ಸಂಸ್ಕೃತಿ, ಪರಂಪರೆ ಹಾಗೂ ಸಮಾಜ ಸೇವೆಯ ಹಲವು ಪ್ರೇರಣಾದಾಯಕ ವಿಷಯಗಳನ್ನು ಹಂಚಿಕೊಂಡಿದ್ದಾರೆ. ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ ರಾಷ್ಟ್ರೀಯ ಹಿರಿಯ ಅಥ್ಲೆಟಿಕ್ಸ್ ಫೆಡರೇಶನ್ ಸ್ಪರ್ಧೆಯಲ್ಲಿ ಭಾರತೀಯ ಕ್ರೀಡಾಪಟುಗಳು ನಿರ್ಮಿಸಿದ ಹೊಸ ದಾಖಲೆಗಳನ್ನು ಅವರು ಶ್ಲಾಘಿಸಿದ್ದಾರೆ. ಗುರಿಂದರ್‌ವೀರ್ ಸಿಂಗ್, ಅನಿಮೇಶ್ ಕುಜುರ್, ತೇಜಸ್ವಿನ್ ಶಂಕರ್, ದೇವ್ ಮೀನಾ ಹಾಗೂ ಕುಲದೀಪ್ ಕುಮಾರ್ ತಮ್ಮ ತಮ್ಮ ವಿಭಾಗಗಳಲ್ಲಿ ರಾಷ್ಟ್ರೀಯ

ದಾಖಲೆಗಳನ್ನು ನಿರ್ಮಿಸಿ ದೇಶದ ಗಮನ ಸೆಳೆದಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ವಿಶೇಷವಾಗಿ ೧೦೦ ಮೀಟರ್ ಓಟದಲ್ಲಿ ಕೇವಲ ಎರಡು ದಿನಗಳ ಅವಧಿಯಲ್ಲಿ ಮೂರು ಬಾರಿ ರಾಷ್ಟ್ರೀಯ ದಾಖಲೆ ಮುರಿದಿರುವುದು ಭಾರತೀಯ ಅಥ್ಲೆಟಿಕ್ಸ್ ಇತಿಹಾಸದಲ್ಲಿ ಮಹತ್ವದ ಘಟ್ಟವಾಗಿದೆ ಎಂದು ಹೇಳಿದ್ದಾರೆ. ಬೇಸಿಗೆ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಾಗರಿಕರು ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಪ್ರಧಾನಿ ಕರೆ ನೀಡಿದರು. ಸಾಕಷ್ಟು ನೀರು ಕುಡಿಯುವುದು ಹಾಗೂ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುವಂತೆ ಅವರು ಸಲಹೆ ನೀಡಿದರು. ಭಾರತದ ವಿವಿಧ ರಾಜ್ಯಗಳ ಸಾಂಪ್ರದಾಯಿಕ ಬೇಸಿಗೆ ಪಾನೀಯಗಳನ್ನೂ ನೆನಪಿಸಿಕೊಂಡ ಪ್ರಧಾನಿ, ಉತ್ತರ ಭಾರತದ ಆಮ್ ಪನ್ನಾ, ಪಂಜಾಬ್‌ನ ಲಸ್ಸಿ, ರಾಜಸ್ಥಾನ ಮತ್ತು ಗುಜರಾತ್‌ನ ಮಜ್ಜಿಗೆ, ಬಿಹಾರದ ಸತ್ತು ಶರ್ಬತ್, ಗೋವಾದ ಕೋಕಮ್ ಶರ್ಬತ್, ದಕ್ಷಿಣ ಭಾರತದ ಪಾನಕಂ ಹಾಗೂ ನೀರ್ ಮೋರ್ ಮೊದಲಾದ ಪಾನೀಯಗಳು ಕೇವಲ ಆಹಾರ ಸಂಸ್ಕೃತಿಯ ಭಾಗವಲ್ಲ, ಭಾರತದ ವೈವಿಧ್ಯತೆಯ ಸಂಕೇತಗಳಾಗಿವೆ ಎಂದು ಅವರು ಹೇಳಿದರು. ಬೇಸಿಗೆ ಎಂದರೆ ಮಾವಿನ ಹಣ್ಣಿನ ಕಾಲ. ದೇಶದ ವಿವಿಧ ಭಾಗಗಳಲ್ಲಿ ಬೆಳೆಯುವ ಹಾಪಸ್, ಕೇಸರ್, ದಶಹರಿ, ಲಂಗ್ಡಾ, ಬೆಂಗನ್‌ಪಲ್ಲಿ, ತೋತಾಪುರಿ, ನೀಲಂ ಸೇರಿದಂತೆ ಹಲವು ಮಾವಿನ ತಳಿಗಳನ್ನು ಉಲ್ಲೇಖಿಸಿದ ಪ್ರಧಾನಿ, ಮಾವು ಬೆಳೆಗಾರ ರೈತರನ್ನು ಅಭಿನಂದಿಸಿದರು. ಕೇರಳದ ಆಲುವಾದಲ್ಲಿ ಸಾಜಿ ವಲಾಶೇರಿಲ್ ನಡೆಸುತ್ತಿರುವ ವಿಶಿಷ್ಟ ಈಜು ಶಾಲೆಯನ್ನೂ ಪ್ರಧಾನಿ ಪ್ರಶಂಸಿ ಸಿದರು. ನದಿಯಲ್ಲೇ ನಡೆಯುವ ಈ ತರಬೇತಿ ಕೇಂದ್ರದಲ್ಲಿ ಈಗಾಗಲೇ ೧೫ ಸಾವಿರಕ್ಕೂ ಹೆಚ್ಚು ಜನರು ಈಜು ಕಲಿತಿದ್ದಾರೆ. ದೋಣಿ ದುರಂತದಿಂದ ಪ್ರೇರಿತವಾಗಿ ಆರಂಭವಾದ ಈ ಸೇವೆ, ಇಂದು ಸಾವಿರಾರು ಜೀವಗಳಿಗೆ ಭದ್ರತೆಯ ಭರವಸೆ ನೀಡುತ್ತಿದೆ ಎಂದು ಹೇಳಿದರು. ವಿದೇಶ

ಪ್ರವಾಸದ ವೇಳೆ ನೆದರ್‌ಲ್ಯಾಂಡ್ಸ್‌ನಿಂದ ಭಾರತಕ್ಕೆ ಮರಳಿದ ಚೋಳರ ಕಾಲದ ಅಮೂಲ್ಯ ತಾಮ್ರ ಫಲಕಗಳ ಬಗ್ಗೆ ಸಂತಸ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಈ ಐತಿಹಾಸಿಕ ದಾಖಲೆಗಳು ಚೋಳ ಸಾಮ್ರಾಜ್ಯದ ಆಡಳಿತ, ಸಮುದ್ರ ವ್ಯಾಪಾರ ಹಾಗೂ ಸಾಂಸ್ಕೃತಿಕ ಪರಂಪರೆಯ ಕುರಿತು ಮಹತ್ವದ ಮಾಹಿತಿಯನ್ನು ಒಳಗೊಂಡಿವೆ ಎಂದು ತಿಳಿಸಿದರು. ಇದೇ ವೇಳೆ ಛತ್ತೀಸ್‌ಗಢದ ಮಲ್ಹಾರ್‌ನಲ್ಲಿ ಪತ್ತೆಯಾದ ಸುಮಾರು ೧ ಸಾವಿರದ ೪೦೦ ರಿಂದ ೧ ಸಾವಿರದ ೫೦೦ ವರ್ಷಗಳಷ್ಟು ಹಳೆಯ ತಾಮ್ರ ಫಲಕಗಳ ಕುರಿತು ಕೂಡ ಪ್ರಧಾನಿ ಉಲ್ಲೇಖಿಸಿದರು. ಖಗೋಳ ವಿಜ್ಞಾನದ ಬಗ್ಗೆ ಯುವಜನರಲ್ಲಿ ಹೆಚ್ಚುತ್ತಿರುವ ಆಸಕ್ತಿಯನ್ನೂ ಪ್ರಧಾನಿ ಶ್ಲಾಘಿಸಿದರು. ಬೆಂಗಳೂರು, ಕೇರಳ, ರಾಜ್‌ಕೋಟ್ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಗೋಳ ವಿಜ್ಞಾನ ಕ್ಲಬ್‌ಗಳು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮನೋಭಾವ ಬೆಳೆಸುತ್ತಿದೆ.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ**

ಬೆಂಗಳೂರು ಆಸ್ಟ್ರಾನಮಿಕಲ್ ಸೊಸೈಟಿಯು ವೀಕ್ಷಣಾ ಸೆಷನ್‌ಗಳನ್ನು ಆಯೋಜಿಸಲಾಗುತ್ತದೆ. ಈ ಸಂಸ್ಥೆಯು ಗ್ರಾಮೀಣ ಪ್ರದೇಶಗಳಲ್ಲಿ ಖಗೋಳಶಾಸ್ತ್ರವನ್ನು ಜನಪ್ರಿಯಗೊಳಿಸುವ ಅಭಿಯಾನವನ್ನು ಕೂಡಾ ಆರಂಭಿಸಿದೆ. 'ಖಗೋಳ್ ಮಂಡಲ್' ಹೆಸರಿನ ಒಂದು ತಂಡ, ೩೦ ಗಂಟೆಗಳ ಅವಧಿಯ ಒಂದು ದೊಡ್ಡ 'ಇನ್ನೊವೇಟಿವ್ ಕೋರ್ಸ್' ಆರಂಭಿಸಿದೆ. ಈ ಕುರಿತು ಬೆಂಗಳೂರು ಆಸ್ಟ್ರಾನಮಿಕಲ್ ಸೊಸೈಟಿಯ ಟ್ರಸ್ಟಿ ಸುಧಾಸ್ ನಟರಾಜನ್ ತಮ್ಮ ಅನಿಸಿಕೆಯನ್ನು ಹಂಚಿಕೊಂಡಿದ್ದಾರೆ.

**ಧ್ವನಿ: ಸುಧಾಸ್ ನಟರಾಜನ್**

ಬೇಸಿಗೆ ರಜೆಯ ಅವಧಿಯಲ್ಲಿ ಯುವಕರು ಖಗೋಳ ವಿಜ್ಞಾನ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರಧಾನಿ ಅವರು ಕರೆ ನೀಡಿದರು. ಉತ್ತರ ಪ್ರದೇಶದಲ್ಲಿ ಗಂಗಾ ಡಾಲ್ಫಿನ್ ರಕ್ಷಣೆಗೆ ಬಳಸಲಾದ ಭಾರತದ ಮೊದಲ ಡಾಲ್ಫಿನ್ ರೆಸ್ಕ್ಯೂ ಆಂಬ್ಯುಲೆನ್ಸ್ ಕುರಿತು ಪ್ರಧಾನಿ ವಿಶೇಷವಾಗಿ ಉಲ್ಲೇಖಿಸಿದರು. ಕಾಲುವೆಯಲ್ಲಿ ಸಿಲುಕಿದ್ದ ಡಾಲ್ಫಿನ್ ಅನ್ನು ಸುಮಾರು ೧೩ ಗಂಟೆಗಳ ಕಾರ್ಯಾಚರಣೆಯ ಬಳಿಕ ರಕ್ಷಿಸಿ ಮತ್ತೆ ನದಿಗೆ ಬಿಡಲಾಗಿದೆ. ಜೀವ ವೈವಿಧ್ಯ ಸಂರಕ್ಷಣೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಅವರು ಹೇಳಿದರು. ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯ ಆಕಾಶ್ ಗುಪ್ತಾ ಹಾಗೂ ಅವರ ಸ್ನೇಹಿತರು, ಮನೋರಮಾ ನದಿಯನ್ನು ಸ್ವಚ್ಛಗೊಳಿಸುತ್ತಿರುವ ಕಾರ್ಯವನ್ನು ಪ್ರಧಾನಿ ಶ್ಲಾಘಿಸಿದ್ದಾರೆ. ಅದೇ ರೀತಿ ಗೋವಾದ ನಿವೃತ್ತ ಶಿಕ್ಷಕ ಬಾಲಕೃಷ್ಣ ಅಯ್ಯ ಅವರು ನೀರಿನ ಸಮಸ್ಯೆ ಪರಿಹಾರಕ್ಕಾಗಿ ಕೈಗೊಂಡ ಪ್ರಯತ್ನಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

<><><><>

ಇರಾನ್ ಜೊತೆ ಪರಮಾಣ ಒಪ್ಪಂದ ಮಾಡಿಕೊಳ್ಳುವ ಹಂತಕ್ಕೆ ಅಮೆರಿಕ ತಲುಪಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಇದೇ ವೇಳೆ ಮಾತುಕತೆ ವಿಫಲವಾದರೆ, ಮಿಲಿಟರಿ ಕ್ರಮವು ಒಂದು ಆಯ್ಕೆಯಾಗಿ ಉಳಿಯುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಇರಾನ್ ಎಂದಿಗೂ ಪರಮಾಣ ಶಸ್ತ್ರಾಸ್ತ್ರವನ್ನು ಹೊಂದದಂತೆ ನೋಡಿಕೊಳ್ಳುವುದು ತಮ್ಮ ಆಡಳಿತದ ಆದ್ಯತೆಯಾಗಿದೆ ಎಂದು ತಿಳಿಸಿದರು. ಪರಮಾಣು ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸುವುದಿಲ್ಲ ಅಥವಾ ಸ್ವಾಧೀನಪಡಿಸಿಕೊಳ್ಳುವುದಿಲ್ಲ ಎಂಬ ಒಪ್ಪಂದಕ್ಕೆ ಇರಾನ್ ಒಪ್ಪಿಗೆ ಸೂಚಿಸಿದೆ. ಆದರೆ, ಮತ್ತೊಂದು ಮೂಲದಿಂದ ಇರಾನ್ ಶಸ್ತ್ರಾಸ್ತ್ರ

ಪಡೆಯುವ ಸಾಧ್ಯತೆಯ ಬಗ್ಗೆ ಟ್ರಂಪ್ ಕಳವಳ ವ್ಯಕ್ತಪಡಿಸಿದ್ದಾರೆ. ಶಾಂತಿಯುತ ಒಪ್ಪಂದಕ್ಕೆ ಅಮೆರಿಕ ಪ್ರಯತ್ನಿಸುತ್ತಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

<><><>

ಚಿಂತನೆ ಮತ್ತು ಕಾರ್ಯದಲ್ಲಿನ ನಾವಿನ್ಯತೆ ಮಿಲಿಟರಿ ಸಾಮರ್ಥ್ಯಗಳ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ರಕ್ಷಣಾ ಸಿಬ್ಬಂದಿ ಮುಖ್ಯಸ್ಥ- ಸಿಡಿಎಸ್ ಜನರಲ್ ಎನ್.ಎಸ್.ರಾಜಾ ಸುಬ್ರಮಣಿ ಹೇಳಿದ್ದಾರೆ. ದೇಶದ ನೂತನ ಸಿಡಿಎಸ್ ಆಗಿ ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜನರಲ್ ಸುಬ್ರಮಣಿ, ಸಶಸ್ತ್ರ ಪಡೆಗಳು, ಕೈಗಾರಿಕೆ, ಶೈಕ್ಷಣಿಕ, ನವೋದ್ಯಮಗಳು ಮತ್ತು ಸಂಶೋಧನಾ ಪರಿಸರ ವ್ಯವಸ್ಥೆಯ ನಡುವೆ ಹೆಚ್ಚಿನ ಸಹಯೋಗವು ಆಧುನೀಕರಣದ ಪ್ರಮುಖ ಚಾಲನಶಕ್ತಿಯಾಗಿದೆ ಎಂದು ಹೇಳಿದರು.

<><><>

ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಇಂದು ನೌಕಾಪಡೆಯ ೨೭ನೇ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರದ ಹಿತಾಸಕ್ತಿ ಕಾಪಾಡುವಲ್ಲಿ ಭಾರತೀಯ ನೌಕಾಪಡೆಯು ಜಾಗರೂಕವಾಗಿದೆ. ಸವಾಲಿನ ಸಂಕೀರಣ, ಅನಿರೀಕ್ಷಿತ ಮತ್ತು ಅನಿಶ್ಚಿತವಾಗಿರುವ ಪ್ರಾದೇಶಿಕ ಭದ್ರತಾ ವಾತಾವರಣದಲ್ಲಿ ಭಾರತೀಯ ನೌಕಾಪಡೆಯು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.

<><><>

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟನ್ಸ್ ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><><>

ಸಿಂಗಾಪುರ ಓಪನ್‌ನ ಬ್ಯಾಡ್ಮಿಂಟನ್ ಪಂದ್ಯಾವಳಿಯ ಪುರುಷರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿಂದು ಭಾರತದ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಇಂಡೋನೇಷ್ಯಾದ ಮುಹಮ್ಮದ್ ಶೋಹಿಬುಲ್ ಫಿಕ್ರಿ ಮತ್ತು ಫಜರ್ ಅಲ್ಫಿಯಾನ್ ಅವರನ್ನು ಎದುರಿಸಲಿದ್ದಾರೆ. ಸೆಮಿಫೈನಲ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಜೋಡಿ, ವಿಶ್ವದ ಅಗ್ರ ಶ್ರೇಯಾಂಕಿತ ದಕ್ಷಿಣ ಕೊರಿಯಾದ ಜೋಡಿ ಸಿಯೊ ಸೆಯುಂಗ್-ಜೇ ಮತ್ತು ಕಿಮ್ ವೊನ್-ಹೋ ಅವರನ್ನು ೨೧-೧೯, ೨೧-೧೮ ಸೆಟ್‌ಗಳಿಂದ ಮಣಿಸಿದರು.

<><><>

'ಪ್ರಧಾನಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲಿ' ಯೋಜನೆಯಡಿಯಲ್ಲಿ ಇದೇ ೨೯ ರಂದು ಒಂದೇ ದಿನ ದೇಶಾದ್ಯಂತ ೧೫ ಸಾವಿರ ಮೇಲ್ಛಾವಣಿ ಸೌರಶಕ್ತಿ ಫಲಕ ಅಳವಡಿಕೆಗಳ ಮೂಲಕ ದಾಖಲೆ ನಿರ್ಮಿಸಲಾಗಿದೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>